ಅಲ್ಲಿನ ಜನರು ಪ್ರಯತ್ನ ಮಾಡಿದ್ದರಿಂದ ಅವರು ಇವತ್ತಿನ ದಿವಸ ಸಿಕ್ಕಿಬಿದ್ದಿದ್ದಾರೆ. ಆದರೂ ಸಹ ಸರ್ಕಾರದವರು ಇದುವರೆಗೆ ಅವರನ್ನು ಸಸ್ಪೆಂಡ್ ಮಾಡಿಲ್ಲ. ಅವರು ಹಾಗೆಯೇ ಅಧಿಕಾರದಲ್ಲಿ ಮುಂದುವರಿಯುತ್ತಿದ್ದಾರೆ. ಅಲ್ಲಿನ ಗೇಣೀದಾರರನ್ನು ಹೆದರಿಸುತ್ತಿದ್ದಾರೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದ್ದರೂ ಇದುವರೆಗೆ ಏತಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲ? ಯಾವಾಗ ಕ್ರಮ ಕೈಗೊಳ್ಳುತ್ತೀರಿ?

Sri Ramakrishna Hegde . This particular Police Officer was caught red-handed by the Vigilance Commission officers and he has been kept under suspension.

Sri G. Narayan Kumar —Kannada ! Kannada !

ಶ್ರೀ ರಾಮಕೃಷ್ಣ ಹೆಗಡೆ.—25-1-84 ರಂದು ಅವರನ್ನು ಸಸ್ಪೆಂಡ್ ಮಾಡಲಾಗಿದೆ. ಮತ್ತು ಅವರ ಮೇಲೆ ಲ್ಯಾಂಟಕರಪ್ಷನ್ ಆಕ್ಟ್ ಕೆಳಗಡೆ ಕೇಸನ್ನು ಸಹ ರಿಜಿಸ್ಟರ್ ಮಾಡಲಾಗಿದೆ.

ಶ್ರೀ ಮದನ ಗೋಪಾಲ ನಾಯ್ಕ — ದಿ|| 7-8-83 ರಂದು ಯು. ಕೆ. ಪಿ. ಯಲ್ಲಿ ಕೆಲಸ ಮಾಡುತ್ತಿದ್ದಂತಹ ಶ್ರೀ ಬಲರಾಂ ಎಂಬುವವರು ಕೆಲಸ ಮಾಡತಕ್ಕ ಸಮಯದಲ್ಲಿ ವೈಮೇಲೆ ಮಣ್ಣು ಕುಸಿದು ಬಿದ್ದು ಗಾಯಗಳಾಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರ ಬಡ ಕುಟುಂಬದ ಸಲುವಾಗಿ ಪರಿಹಾರ ಕ್ಕಾಗಿ ಎ. ಸಿ. ಮತ್ತು ಡಿ. ಸಿ. ಯವರಿಗೆ ಅರ್ಜಿಕೊಟ್ಟು ಕೇಳಲಾಗಿತ್ತು. ಆದರೆ ಇದುವರೆಗೆ ಆ ಬಡ ಕುಟುಂಬಕ್ಕೆ ಯಾವ ರೀತಿಯ ಪರಿಹಾರವೂ ದೊರಕಿಲ್ಲ. ಆದ್ದರಿಂದ, ಸರ್ಕಾರದ ಪರವಿಂದ ಆ ಒಂದು ಕುಟುಂಬಕ್ಕೆ ಪರಿಹಾರಧನ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಡಿ. ದೇವೇಗೌಡ.— ಈ ವಿಷಯವನ್ನು ಈಗ ತಾನೇ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಇದರ ಬಗ್ಗೆ ವರದಿ ಕಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡುತ್ತೇವೆ ಮತ್ತು ವರದಿ ಬಂದ ಮೇಲೆ ಕ್ರಮತೆಗೆದುಕೊಳ್ಳುತ್ತೇವೆ.

(vi) ವಿಷಯ : ವರದಕ್ಷಿಣೆ ಕೊಡದ ಕಾರಣದ ಮೇಲೆ ಶ್ರೀಮತಿ ಕಮಲಮ್ಮ ಎಂಬುವವರ ಕೊಲೆ.

ಶ್ರೀ ಕೆ. ಶಿವಮೂರ್ತಿ.—ನನ್ನ ಕ್ಷೇತ್ರದ ಶ್ರೀಮತಿ ಕಮಲಮ್ಮ ಎಂಬ ಹೆಣ್ಣು ಮಗಳನ್ನು ಚಿತ್ರದುರ್ಗ ತಾಲ್ಲೂಕಿನಲ್ಲಿ ಓಬಣ್ಣ ಈಶ್ವರಪ್ಪ ಎಂಬುವವರಿಗೆ ಮದುವೆ ಮಾಡಿಕೊಟ್ಟರು. ಮದುವೆ ಆದ ತಕ್ಷಣ ಕಲಹ ಪ್ರಾರಂಭವಾಯಿತು. ನಿನ್ನ ತಂದೆ ತಾಯಿಗಳು ಅಥವಾ ನಿಮ್ಮ ಕಡೆಯವರು ವರದಕ್ಷಿಣೆ ಕೊಟ್ಟಿಲ್ಲ. ಆದ್ದರಿಂದ ನಿನಗೆ ಮಕ್ಕಳು ಆಗುವುದು ಬೇಡ, ಆಪರೇಷನ್ ಮಾಡಿಸಿಕೋ. ಇಲ್ಲದಿದ್ದರೆ, ನೀನು ಇರುವುದೇ ಬೇಡ ಎಂದು ಗಂಡ. ಅವನ ತಾಯಿ ಎಲ್ಲ ಕಿರಕುಳ ಕೊಡಲು ಪ್ರಾರಂಭಿಸಿದರು. ಕೊನೆಗೆ ವರದಕ್ಷಿಣೆ ತರಲಿಲ್ಲವೆಂದು 22-7-83 ರಂದು ಆ ಹೆಣ್ಣು ಮಗಳನ್ನು ಕೊಲೆ ಮಾಡಿದ್ದಾರೆಂದು ತಿಳಿದು ಬಂದಿದೆ. ಆ ಬಗ್ಗೆ ಪೋಲೀಸ್ ಠಾಣೆಯಲ್ಲಿ ಕೇಸ್ ದಾಖಲು ಮಾಡಿ ಸುಪ್ ಇನ್ಸ್‌ಪೆಕ್ಟರಿಗೆ ಸ್ಥಳ ತೋರಿಸಿದರೂ ಕ್ರಮ ತೆಗೆದುಕೊಂಡಿಲ್ಲ. ಯಾರು ಮಗಳನ್ನು ಕಳೆದುಕೊಂಡಿದ್ದಾರೆ ಆ ತಂದೆ ತಾಯಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಪತ್ರ ಬರೆದರೂ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಆಕೆಯ ಹೆಣ ಎಲ್ಲಿದೆ ಎಂದು ಪತ್ತೆ ಆಗಿಲ್ಲ. ಇದೇ ರೀತಿ, ವರದಕ್ಷಿಣೆ ವಿಚಾರದಲ್ಲಿ ಚಾವಣಗೆರೆಯಲ್ಲಿ ಒಬ್ಬ ಹೆಣ್ಣು ಮಗಳನ್ನು ಗಂಡನೇ ಬೆಂಕಿ ಹಚ್ಚಿ ಸಾಯಿಸಿದ್ದಾನೆ. ವರದಕ್ಷಿಣೆ ಬೇಡಿಕೆಯಿಂದ ಹೆಣ್ಣು ಮಕ್ಕಳು ಬಾಳುವುದು ಕಷ್ಟವಾಗಿದೆ.

ಅಧ್ಯಕ್ಷರು.— ಇದನ್ನು ಪ್ರಶ್ನೆ ಮೂಲಕ ಕೇಳುವಿಸಿಕೊಡಿ.

ಶ್ರೀ ಕೆ. ಶಿವಮೂರ್ತಿ.—ಕೇಳುವಿರತಕ್ಕ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ.

ಅಧ್ಯಕ್ಷರು.— ಈ ಪ್ರಶ್ನೆ ಕೇಳುವಿಸಿದ್ದೀರಾ ?

ಶ್ರೀ ಕೆ. ಶಿವಮೂರ್ತಿ.— ಇದರ ಬಗ್ಗೆ ಸಂಬಂಧಪಟ್ಟ ಎಲ್ಲರ ಹತ್ತಿರ ಮಾತನಾಡಿದ್ದೇನೆ. ಮತ್ತು ಮುಖ್ಯ ಮಂತ್ರಿಗಳಿಗೂ ಮನವಿ ಕೇಳಿಸಿದ್ದೇನೆ. ಅವರಿಂದ ಬಂದಿರತಕ್ಕ ಪತ್ರಗಳು ನನ್ನ ಹತ್ತಿರ ಇವೆ. ಈ ವಿಷಯ ಸ್ಥಳೀಯ ಪತ್ರಿಕೆಯಲ್ಲೂ ಬಂದಿದೆ. ಸಮಾಜದಲ್ಲಿರತಕ್ಕ ಹೆಣ್ಣುಮಕ್ಕಳನ್ನು ವರದಕ್ಷಿಣೆ ವಿಚಾರದಲ್ಲಿ ಸಾಯಿಸುತ್ತಿದ್ದಾರೆ. ಪೋಲೀಸರು ಇದರಲ್ಲಿ ಶಾಮೀಲಾಗಿದ್ದಾರೆ. ಪೋಲೀಸರು ಇದಕ್ಕೆ ಬೆಂಬಲ ಕೊಡುವುದರಿಂದ ಅನೇಕ ಕಡೆ ಸಾವುಗಳು ಸಂಭವಿಸಿವೆ. ನಾನು ಆಗಲೇ ಹೇಳಿದ ಹಾಗೆ ನಮ್ಮ ಕ್ಷೇತ್ರದ ಹೆಣ್ಣುಮಗಳ ಕೊಲೆಯಾಗಿರತಕ್ಕ ಸಂಶಯ ಬಂದಿದೆ. ಇದರ ಬಗ್ಗೆ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ರಾಮಕೃಷ್ಣ ಹೆಗಡೆ.— ಯಾವುದೇ ವರದಕ್ಷಿಣೆಯ ಸಂಬಂಧದಲ್ಲಿ ಮಹಿಳೆಯರ ಸಾವು ಸಂಭವಿಸಿದರೆ ಸಿ. ಓ. ಡಿ. ತನಿಖೆ ಮಾಡಬೇಕೆಂದು ಸರ್ಕಾರ ಆರ್ಡ್ಲ್ ಮಾಡಿದೆ. ಆ ಪ್ರಕಾರ ಇದರ ಬಗ್ಗೆ ಸಿ. ಓ. ಡಿ. ತನಿಖೆ ಆಗುತ್ತದೆ. ಆಗದಿದ್ದರೆ ಮಾಡಿಸುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸದಸ್ಯರು ಹೇಳಿದ್ದನ್ನು ಮುಖ್ಯ ಮಂತ್ರಿಗಳು ಸರಿಯಾಗಿ ಕೇಳಿದರೋ ಇಲ್ಲವೋ ಗೊತ್ತಿಲ್ಲ. ಮಕ್ಕಳು ಆಗಬಾರದೆಂದು ಆಪರೇಷನ್ ಮಾಡಿಸಿಕೊಳ್ಳುವಂತೆ

ಒತ್ತಾಯಿಸಿದರಂತೆ. ಹಾಗೂ ಮಗು ಆಯಿತಂತೆ. ಈಗ ಮಗು-ತಾಯಿ ಪತ್ತೆ ಇಲ್ಲವಂತೆ.

ಅಧ್ಯಕ್ಷರು.— ಸಿ. ಓ. ಡಿ. ತನಿಖೆ ಮಾಡಿಸುತ್ತೇವೆಂದು ಹೇಳಿದರಲ್ಲ ಬಿಡಿ.

ಶ್ರೀ ಕೆ. ಶಿವಮೂರ್ತಿ.— 7 ತಿಂಗಳಾಯಿತು ಸ್ವಾಮಿ.

ಅಧ್ಯಕ್ಷರು.—ಕುಳಿತುಕೊಳ್ಳಿ. ಸಿ. ಓ. ಡಿ. ತನಿಖೆ ಮಾಡಿಸುತ್ತೇನೆ ಎಂದು ಹೇಳಿದ್ದಾರೆ.

(vii) ವಿಷಯ : ಗುಲ್ಬರ್ಗದ ಎಂ. ಎಸ್. ಕೆ. ಮಿಲ್ ನೌಕರರಿಗೆ ಏಕರೂಪದ ವೇತನ ನೀಡುವ ಬಗ್ಗೆ.

ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗ).— ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ನಿನವರು ನಾಲ್ಕು ಗಿರಣಿಗಳನ್ನು ನಡೆಸುತ್ತಿದ್ದಾರೆ. ಬೆಂಗಳೂರಿನಲ್ಲಿ ಎರಡು ಗಿರಣಿಗಳನ್ನು ನಡೆಸುತ್ತಿದ್ದು, ಗುಲ್ಬರ್ಗದಲ್ಲಿ ಎಂ. ಎಸ್. ಕೆ. ಮಿಲ್ ಮತ್ತು ಯಲ್ಲಮ್ಮ ಮಿಲ್ ಎಂದು ಎರಡು ಗಿರಣಿಗಳನ್ನು ನಡೆಸುತ್ತಿದ್ದಾರೆ. ನಾಲ್ಕು ಗಿರಣಿಗಳಲ್ಲಿ ಒಂದೇ ರೀತಿಯ ಕೆಲಸಗಳು ನಡೆಯುತ್ತಿದ್ದರೂ ಸಂಬಳ ಸಾರಿಗೆಗಳಲ್ಲಿ ಸ್ವಲ್ಪ ವ್ಯತ್ಯಾಸಗಳನ್ನು ಇಟ್ಟುಕೊಂಡಿದ್ದಾರೆ ಆದರೆ ಕೆಲಸದ ಹೊರೆ ಮಾತ್ರ ಎಲ್ಲ ಕಡೆ ಒಂದೇ ರೀತಿ ಇದೆ. ಯಲ್ಲಮ್ಮ ಮಿಲ್‌ನಲ್ಲಿ ಹೆಚ್ಚಿಗೆ ಸಂಬಳ ಕೊಡುತ್ತಿದ್ದರೆ ಎಂ. ಎಸ್. ಕೆ ಮಿಲ್‌ನಲ್ಲಿ ಕಡಿಮೆ ಕೊಡುತ್ತಿದ್ದಾರೆ. ಆದ್ದರಿಂದ ಎಂ. ಎಸ್. ಕೆ ಮಿಲ್‌ನಲ್ಲೂ ಒಂದೇ ರೀತಿ ಬೇರೆ ಕಡೆ ಕೊಡುವಂತೆ ಸಂಬಳ ಕೊಡಬೇಕೆಂದು ಅವರು ಉಪವಾಸ ಸತ್ಯಾಗ್ರಹವನ್ನು ಮಾಡಿದ್ದಾರೆ. ಈ ಬಗ್ಗೆ ಹೋರಾಟ ಪ್ರಾರಂಭವಾಗಿ 5 ತಿಂಗಳಾಗಿದ್ದರೂ, ಈ ವಿಷಯದಲ್ಲಿ ಮಾತುಕತೆ ಆಗಿದ್ದರೂ ಮ್ಯಾನೇಜ್‌ಮೆಂಟ್‌ನವರು ಒಪ್ಪದೇ ಇರತಕ್ಕದ್ದು ಖಂಡನೀಯ. ಮೂರು ಗಿರಣಿಗಳಲ್ಲಿ ಒಂದು ರೀತಿ ಕೊಡುತ್ತಿದ್ದು ಎಂ. ಎಸ್. ಕೆ. ಮಿಲ್‌ನಲ್ಲಿ ಮಾತ್ರ ಕೊಡುವುದಕ್ಕೆ ಒಪ್ಪುತ್ತಿಲ್ಲ. ಇದರಿಂದ ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ. ಮತ್ತೆ ಅವರು ಹೋರಾಟಕ್ಕೆ ಇಳಿಯುವ ಪರಿಸ್ಥಿತಿ ಇದೆ. ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್ನಿನ ಅಧಿಕಾರಿಗಳು ಇಲ್ಲೇ ಇದ್ದಾರೆ ಆದ್ದರಿಂದ ನಾನು ಕಾರ್ಮಿಕ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಯಲ್ಲಮ್ಮ ಮಿಲ್‌ನಲ್ಲಿ ಮತ್ತು ಬೇರೆ ಮಿಲ್‌ನಲ್ಲಿ ಯಾವ ರೀತಿ ಕೊಡುತ್ತಿದ್ದಾರೋ ಅದೇ ರೀತಿ ಎಂ. ಎಸ್. ಕೆ. ಮಿಲ್‌ನಲ್ಲೂ ಕೊಡಬೇಕೆಂದು.

Sri Azeez Sait.—Sir, just now this matter has been brought to my notice. I will make enquiries and report back to the House in this behalf.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ, ನಿನ್ನೆ ಮೆರವಣಿಗೆ ಮಾಡಿದ ಬಗ್ಗೆ .....

ಅಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ. ಬೀದಿಯಲ್ಲಿ ಯಾರೋ ಮೆರವಣಿಗೆ ಮಾಡಿದ ಬಗ್ಗೆ ಹೇಳಿ ಎಂದರೆ ಏನು ಮಾಡುವುದಕ್ಕಾಗುತ್ತದೆ ? ಅದಕ್ಕೆ ಸರ್ಕಾರ ಹೊಣೆಯೇ ?

ಶ್ರೀ ಜಿ. ನಾರಾಯಣಕುಮಾರ್.— ನಾವು ಬೆಂಗಳೂರು ಬಂದ್ ಮತ್ತು ಇತರ ಹೋರಾಟಗಳನ್ನು ಸರ್ಕಾರದ ಗಮನ ಸೆಳೆಯುವುದಕ್ಕೆ ಆಚರಿಸಿದ್ದೇವೆ. ಆದರೆ ಕನ್ನಡಕ್ಕೆ ದ್ರೋಹ ಮಾಡುತ್ತಿರುವುದರ ಬಗ್ಗೆ ನಮಗೆ ಮಾತನಾಡಲು ಅವಕಾಶ ಕೊಡಬೇಕು.

(viii) ವಿಷಯ : ನಿಪ್ಪಾಣಿ ಭಾಗದ ತಂಬಾಕು ಬೆಳೆಗಾರರಿಗೆ ನೆರವು ನೀಡುವ ವಿಚಾರ

ಡಾ॥ ವಿ. ಎಸ್. ಆಚಾರ್ಯ.— ಮಾನ್ಯ ಅಧ್ಯಕ್ಷರೆ, ನಿಪ್ಪಾಣಿ ಮತ್ತು ಆಸುಪಾಸಿನಲ್ಲಿ ಪ್ರಮುಖವಾದ ಬೆಳೆ ತಂಬಾಕು. ಜನವರಿ 30ನೇ ತಾರೀಖಿನ ಒಂದ ಮಳೆಯಿಂದಾಗಿ ರೈತರು ಕಟಾವು ಮಾಡಿ ಹೊಲದಲ್ಲಿ ಹಾಕಿದ್ದ ತಂಬಾಕೆಲ್ಲಾ ನಾಶವಾಗಿದೆ. ಅದು ಯಾವುದೇ ಉಪಯೋಗಕ್ಕೆ ಬಾರದ ರೀತಿಯಲ್ಲಿ ಆಗಿದೆ. ಅವರ ಪ್ರಮುಖ ಬೆಳೆ ತಂಬಾಕು ಆಗಿರುವುದರಿಂದ ರೈತರು ಈಗ ಆಕಾಶ ನೋಡುವ ಪರಿಸ್ಥಿತಿ ಬಂದಿದೆ. ರೆವಿನ್ಯೂ ಸಚಿವರು ಆ ಭಾಗದಿಂದ ಬಂದವರಾಗಿರುವುದರಿಂದ ಇದು ಅವರಿಗೆ ಗೊತ್ತಿದೆ. ಆದ್ದರಿಂದ ಅವರಿಗೆ ಕೂಡಲೇ ನಷ್ಟಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಸಾಲ ಮರುಪಾವತಿಗೆ ಒಂದು ವರ್ಷ ರಜಾ ಘೋಷಣೆ ಮಾಡಿ ಸಾಲದ ಬಡ್ಡಿ ಮನ್ನಾ ಮಾಡುವುದರ ಜೊತೆಗೆ ಮುಂದಿನ ಬೆಳೆಗೆ ಪುನರ್‌ಸಾಲದ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಅಲ್ಲಿನ ರೈತರಿಗೆ ತಂಬಾಕು ಬೆಳೆ ಬಿಟ್ಟರೆ ಬೇರೆ ಏನೂ ಬೆಳೆ ಇಲ್ಲ. ಬೇರೆ ಆದಾಯ ಇಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದು ಸನ್ಮಾನ್ಯ ಕೃಷಿ ಮಂತ್ರಿಗಳಾಗಲೀ ಕಂದಾಯ ಸಚಿವರಾಗಲೀ ಕ್ರಮ ತೆಗೆದುಕೊಂಡು ಸಹಾಯ ಮಾಡಬೇಕು. ಕಂದಾಯ ಸಚಿವರು ಇಲ್ಲೇ ಇದ್ದಾರೆ. ಆದ್ದರಿಂದ ಅವರು ಈ ಬಗ್ಗೆ ಹೇಳಬೇಕು. ನಿಪ್ಪಾಣಿ ಶಾಸಕರು ಈ ಬಗ್ಗೆ ಪ್ರತ್ಯೇಕವಾದ ಸೂಚನೆ ಕಳುಹಿಸಿದ್ದು ಅವರೂ ಇದರ ಬಗ್ಗೆ ಹೇಳುತ್ತಾರೆ.

ಅಧ್ಯಕ್ಷರು.— ಅವರಿಗೆ ಬಿಡಬೇಕಾಗಿತ್ತು. ನೀವು ಏತಕ್ಕೆ ಮಾತನಾಡುವುದಕ್ಕೆ ಹೋದಿರಿ ?

ಶ್ರೀ ವಿ. ಎಲ್. ಪಾಟೀಲ್.— ಬೆಳೆ ನಾಶವಾಗಿರುವುದು ನಿಜ. ಸರ್ಕಾರ ಆದರ ಬಗ್ಗೆ ಪರಿಶೀಲನೆ ಮಾಡುತ್ತದೆ.